# ‘ಕವಿತೆ ಭಾಷೆಯದೇ ಆದ ಹಂಬಲ’



ಕನ್ನಡದ ಮಹತ್ವದ, ವಿಶಿಷ್ಟ ಕವಿ ಎಸ್. ಮಂಜುನಾಥ್ ಇತ್ತೀಚೆಗೆ ಆಕಸ್ಮಿಕವಾಗಿ ನಿಧನರಾದರು. ಅವರ ಅಪರೂಪದ ಸಂದರ್ಶನದೊಂದಿಗೆ ಅವರ ಬದುಕಿನ ಕೊನೆಯ ಕ್ಷಣಗಳು ಇಲ್ಲಿ ದಾಖಲಾಗಿವೆ...

ಕವಿ ಮಂಜುನಾಥ್ ಮೈಸೂರಿನ ಖಾಸಗೀ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕದಲ್ಲಿ ಸುಮಾರು ಒಂದು ವಾರ ಕಾಲ ಮಲಗಿದ್ದರು. ಅವರು ತೀರಿ ಹೋಗುವ ಸುಮಾರು ಐದು ಗಂಟೆಗಳ ಮೊದಲು ಅವರು ಒಂದು ತಿಂಗಳ ಹಿಂದೆ ಆಕಾಶವಾಣಿಯಲ್ಲಿ ಓದಿದ್ದ ಸ್ವರಚಿತ ಕವಿತೆಗಳ ಧ್ವನಿಮುದ್ರಣವನ್ನು ಅವರ ಕುಟುಂಬದ ಕಡೆಯವರು ಪಡೆದುಕೊಂಡರು. ಬಹು ಅಂಗ ವೈಫಲ್ಯದಿಂದಾಗಿ ಕೋಮಾಕ್ಕೆ ಹೊರಟು ಹೋಗಿದ್ದ ಮಂಜುನಾಥ್ ಕಿವಿಯ ಪಟಲಗಳಿಗೆ ಇಯರ್ ಫೋನ್ ಮುಖಾಂತರ ಅವರದೇ ಕವಿತೆಗಳನ್ನು ಅವರದೇ ಧ್ವನಿಯಲ್ಲಿ ಕೇಳಿಸಿದರೆ ಬಹುಶಃ ಅವರು ಆ ದೀರ್ಘ ಕೋಮಾದಿಂದ ಹೊರಗೆ ಬರಬಹುದು, ಕಣ್ಣುಗಳನ್ನು ತೆರೆಯಬಹುದು ಅನ್ನವುದು ಒಂದು ಸಣ್ಣ ನಂಬಿಕೆ ಮತ್ತು ಬಲುದೊಡ್ಡ ಆಸೆಯಾಗಿತ್ತು. ಆದರೆ, ಮಂಜುನಾಥ್